# ಅಧ್ಯಾಯ–IV

## ಸಮೀಕ್ಷಾ ಕಾರ್ಯದಲ್ಲಿ ಗಮನಿಸಲಾದ ಅಂಶಗಳು ಹಾಗೂ ಮೇಲ್ವಿಚಾರಣೆಗಳಿಗೆ ಸಂಬಂಧಿತ ಅಂಶಗಳು

## ಸಮೀಕ್ಷಾ ಕಾರ್ಯದಲ್ಲಿ ಗಮನಿಸಲಾದ ಅಂಶಗಳು

**4.1.** ಯೋಜನೆಗಳನ್ನು (ದೀನದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ/ಸೌಭಾಗ್ಯ ಹಾಗೂ ರಾಜೀವ ಗಾಂಧಿ ಗ್ರಾಮೀಣ ವಿದ್ಯುತ್ ಯೋಜನೆ) ಕಾರ್ಯಗತಗೊಳಿಸಿದ್ದರ ಬಗ್ಗೆ ಫಲಾನುಭವಿಗಳು ಮತ್ತು ಗ್ರಾಮ ಪಂಚಾಯತಿಗಳ ಅಭಿಪ್ರಾಯಗಳನ್ನು ಪಡೆದುಕೊಳ್ಳುವ ಸಲುವಾಗಿ ಹಾಗೂ ಚಿಂತಿಸಲಾಗಿದ್ದ ಪ್ರಯೋಜನಗಳು ಗುರಿಯಾಗಿಸಿಕೊಳ್ಳಲಾಗಿದ್ದ ಜನತೆಯನ್ನು ಎಷ್ಟರಮಟ್ಟಿಗೆ ತಲುಪಿದ್ದವು ಎಂಬುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಲೆಕ್ಕಪರಿಶೋಧನೆಯು ಫಲಾನುಭವಿಗಳು ಮತ್ತು ಗ್ರಾಮ ಪಂಚಾಯತಿಗಳ ಒಂದು ಸಮೀಕ್ಷಾ ಕಾರ್ಯವನ್ನು ನಡೆಸಿತು. ಈ ಉದ್ದೇಶಕ್ಕಾಗಿ, ಯೋಜನೆಗಳ ಅಡಿಯಲ್ಲಿ ಚಿಂತಿಸಲಾಗಿದ್ದಂತಹ ಪ್ರಯೋಜನಗಳ ವಿವಿಧ ಅಂಶಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಪ್ರಶ್ನಾವಳಿಗಳ ನಮೂನೆಯ ಎರಡು ಸ್ವತಂತ್ರ ಸೆಟ್ಟುಗಳನ್ನು, ಒಂದು ಫಲಾನುಭವಿಗಳ ಸಮೀಕ್ಷೆಗಾಗಿ ಹಾಗೂ ಮತ್ತೊಂದು ಗ್ರಾಮ ಸಮೀಕ್ಷೆಗಾಗಿ ತಯಾರಿಸಲಾಗಿದ್ದಿತು.


ಸಮೀಕ್ಷಾ ಕಾರ್ಯದ ಉದ್ದೇಶಕ್ಕಾಗಿ, ಲೆಕ್ಕಪರಿಶೋಧನಾ ಸಿಬ್ಬಂದಿ/ಅಧಿಕಾರಿಗಳು ಆಯ್ಕೆ ಮಾಡಿಕೊಳ್ಳಲಾಗಿದ್ದ ಗ್ರಾಮಗಳಲ್ಲಿ ಫಲಾನುಭವಿಗಳ ಮನೆಗಳು ಹಾಗೂ ಗ್ರಾಮ ಪಂಚಾಯತಿಗಳ ಮುಖ್ಯಸ್ಥರನ್ನು ಭೇಟಿ ಮಾಡಿದರು. ಅವರುಗಳ ಒಪ್ಪಿಗೆಯನ್ನು ಪಡೆದುಕೊಂಡನಂತರ, ಫಲಾನುಭವಿಗಳಿಂದ ಮತ್ತು ಗ್ರಾಮ ಪಂಚಾಯತಿಗಳ ಮುಖ್ಯಸ್ಥರುಗಳಿಂದ ಪ್ರಶ್ನಾವಳಿಗಳ ನಮೂನೆಯ ಪ್ರತಿಯೊಂದು ಪ್ರಶ್ನೆಗೂ ಉತ್ತರಗಳನ್ನು ಪಡೆದುಕೊಳ್ಳಲಾಯಿತು. ಉತ್ತರಗಳಿಂದ ಭರ್ತಿ ಮಾಡಲಾದ ನಮೂನೆಗೆ ಫಲಾನುಭವಿಗಳು ಹಾಗೂ ಲೆಕ್ಕಪರಿಶೋಧನಾ ಸಿಬ್ಬಂದಿ/ಅಧಿಕಾರಿಗಳು ಜಂಟಿಯಾಗಿ ಸಹಿ ಮಾಡಲ್ಪಟ್ಟಿದ್ದವು. ಅಲ್ಲದೆಯೇ, ಮೊಬೈಲು ಸಾಧನವು ಇರುವ ಸ್ಥಳ, ಸಮಯ ಹಾಗೂ ಇನ್ನಿತರೆ ಸಂದರ್ಭೋಚಿತ ವಿವರಗಳನ್ನು ನೀಡುವಂತಹ ಜಿಯೋ–ಟ್ಯಾಗ್ ಉಲ್ಲೇಖದೊಂದಿಗೆ ಸಮೀಕ್ಷೆ ಮಾಡಲಾದಂತಹ ಪ್ರತಿಯೋರ್ವ ಫಲಾನುಭವಿ ಹಾಗೂ ಗ್ರಾಮ ಪಂಚಾಯತಿಗಳ ಮುಖ್ಯಸ್ಥರ ಛಾಯಾಚಿತ್ರಗಳನ್ನು ತೆಗೆದುಕೊಳ್ಳಲಾಯಿತು. ಎಲ್ಲಾ ಐದು ವಿಸಕಂಗಳ ಉದ್ದಗಲಕ್ಕೂ 105 ಗ್ರಾಮಗಳಲ್ಲಿ ಒಟ್ಟಾರೆ 979 ಫಲಾನುಭವಿಗಳನ್ನು ಭೇಟಿ ಮಾಡಲಾಯಿತು.

ಫಲಾನುಭವಿಗಳ ಹಾಗೂ ಗ್ರಾಮ ಪಂಚಾಯತಿ ಮುಖ್ಯಸ್ಥರುಗಳ ಅಭಿಪ್ರಾಯಗಳನ್ನು ಸಂಕ್ಷಿಪ್ತವಾಗಿ ಈ ಕೆಳಗೆ ನೀಡಲಾಗಿದೆ.

### ***ಫಲಾನುಭವಿಗಳ ಸಮೀಕ್ಷೆ***

**4.1.1.** ಕೆಲವು ಪ್ರಮುಖ ಪ್ರಶ್ನೆಗಳಿಗೆ 979 ಫಲಾನುಭವಿಗಳ ಪ್ರತಿಕ್ರಿಯೆಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತಿಳಿಸಲಾಗಿದೆ.

**ರೇಖಾಚಿತ್ರ ಸಂಖ್ಯೆ 4.1: 105 ಗ್ರಾಮಗಳಲ್ಲಿ 979 ಫಲಾನುಭವಿಗಳ ಪ್ರತಿಕ್ರಿಯೆಗಳು**



ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು:

- ವಿದ್ಯುತ್ ಸಂಪರ್ಕದ ಜೊತೆಗೆ ಸಿಎಫ್ಎಲ್ ಬಲ್ಬುಗಳನ್ನು ಒದಗಿಸಬೇಕಿದ್ದಿತು, ಆದರೆ ಅದನ್ನು ಒದಗಿಸಲಿಲ್ಲ ಎಂಬುದಾಗಿ 148 ಫಲಾನುಭವಿಗಳು ತಿಳಿಸಿದರು;


- ವಿದ್ಯುತ್ ಸರಬರಾಜಿನಲ್ಲಿ ಸುಧಾರಣೆಯಾಗಿರುವುದು ಎಂಬುದಾಗಿ 890 ಫಲಾನುಭವಿಗಳು ತಿಳಿಸಿದರು ಹಾಗೂ ಕೃಷಿಯೇತರ ಉದ್ದೇಶಗಳಿಗಾಗಿ ವಿದ್ಯುತ್ ಸರಬರಾಜಿನ ಅವಧಿಯು 22 ರಿಂದ 24 ಗಂಟೆಗಳಷ್ಟು ಆಗಿರುತ್ತವೆ ಎಂಬುದಾಗಿ 802 ಫಲಾನುಭವಿಗಳು ತಿಳಿಸಿದರು;

- ವಿದ್ಯುತೀಕರಣದ ಕಾರಣ ರಾತ್ರಿಯ ವೇಳೆಯಲ್ಲಿ ಸಂಚಾರ/ಜನತೆಯ ನಡೆದಾಟ/ಸುಭದ್ರತೆಯು ಹೆಚ್ಚಳಗೊಂಡಿರುವುದಾಗಿ 826 ಫಲಾನುಭವಿಗಳು ತಿಳಿಸಿದರು ಹಾಗೂ ಓದುವ/ಅಧ್ಯಯನ ಮಾಡುವ ಅವಧಿ/ಗಂಟೆಗಳು/ಟಿವಿ ನೋಡುವ ಸಮಯ/ವಿದ್ಯುತ್ ಆಧಾರಿತ ಗೃಹೋಪಯೋಗಿ ಸಾಧನಗಳನ್ನು ಉಪಯೋಗಿಸಿಕೊಳ್ಳುವುದು ಉತ್ತಮಗೊಂಡಿರುವುದಾಗಿ 805 ಫಲಾನುಭವಿಗಳು ತಿಳಿಸಿದರು.

***ಗ್ರಾಮ ಸಮೀಕ್ಷೆ***

**4.1.2.** ವಿದ್ಯುತ್ ವಿತರಣಾ ಟ್ರಾನ್ಸ್‌ಫಾರ್ಮರ್ ಕೇಂದ್ರಗಳು, ಶಾಲೆಗಳು ಮತ್ತು ಆರೋಗ್ಯ ಕೇಂದ್ರಗಳು ಮುಂತಾದ ಸಾರ್ವಜನಿಕ ಸ್ಥಳಗಳಿಗೆ ವಿದ್ಯುತ್ ವ್ಯವಸ್ಥೆ, ಇತ್ಯಾದಿಗಳ ಸಮರ್ಪಕತೆಯ ಬಗ್ಗೆ ಪ್ರತಿಕ್ರಿಯೆ/ಅಭಿಪ್ರಾಯವನ್ನು ಪಡೆದುಕೊಳ್ಳುವ ಸಲುವಾಗಿ ಲೆಕ್ಕಪರಿಶೋಧನೆಯು ಆಯ್ಕೆ ಮಾಡಿಕೊಳ್ಳಲಾಗಿದ್ದ 105 ಗ್ರಾಮ ಪಂಚಾಯತಿ ಮುಖ್ಯಸ್ಥರುಗಳನ್ನು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳನ್ನು (ಪಿಡಿಒಗಳು) ಭೇಟಿ ಮಾಡಿತು. ಲೆಕ್ಕಪರಿಶೋಧನೆಯು ಮನೋರಂಜನಾ ಅನುಕೂಲತೆಗಳು, ಅಪರಾಧಗಳು, ವಿದ್ಯುತ್ ಆಧಾರಿತ ಗೃಹೋಪಯೋಗಿ ಸಾಧನಗಳಿಗಾಗಿ ಸ್ಥಳೀಯ ಅಂಗಡಿ ಮಳಿಗೆಗಳ ಸ್ಥಾಪನೆ, ಓಲ್ಟೇಜು ಸ್ಟೆಬಿಲೈಸರುಗಳ ಬಳಕೆ, ಇತ್ಯಾದಿ ಕೆಲವು ಕ್ಷೇತ್ರಗಳ ಬಗ್ಗೆ ಖಚಿತಪಡಿಸಿಕೊಂಡಿತು. ಪ್ರತಿಕ್ರಿಯಗಳನ್ನು ಈ ಕೆಳಗಿನ ರೇಖಾಚಿತ್ರದಲ್ಲಿ ತಿಳಿಸಲಾಗಿರುವುದು.

**ರೇಖಾಚಿತ್ರ ಸಂಖ್ಯೆ 4.2: 105 ಗ್ರಾಮ ಪಂಚಾಯತಿ ಮುಖ್ಯಸ್ಥರುಗಳು/ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳಿಂದ ಪ್ರತಿಕ್ರಿಯೆಗಳು**




ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು.

- ವಿದ್ಯುತೀಕರಣದ ನಂತರದಲ್ಲಿ ಅಪರಾಧಗಳ ಸಂಖ್ಯೆಯಲ್ಲಿ ಇಳಿಮುಖಗೊಂಡಿರುವುದು, ಅದರಲ್ಲೂ ವಿಶೇಷವಾಗಿ ರಾತ್ರಿಯ ವೇಳೆಯಲ್ಲಿ, ಎಂಬುದಾಗಿ ಸಮೀಕ್ಷೆ ಮಾಡಲಾದ ಶೇಕಡಾ 90ರಷ್ಟು ಗ್ರಾಮಗಳು ತಿಳಿಸಿದವು;

- ಶಾಲೆಗಳು, ಆರೋಗ್ಯ ಕೇಂದ್ರಗಳು, ಡಿಸ್ಪೆನ್ಸರಿಗಳು, ಸಮುದಾಯ ಕೇಂದ್ರಗಳು, ಇತ್ಯಾದಿ ಸಾರ್ವಜನಿಕ ಸ್ಥಳಗಳಲ್ಲಿ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸಲಾಗಿರುವುದು ಎಂಬುದಾಗಿ ಶೇಕಡಾ 49ರಿಂದ ಶೇಕಡಾ 94ರಷ್ಟು ಗ್ರಾಮಗಳು ತಿಳಿಸಿದವು;

- ಮನೋರಂಜನೆಗಾಗಿ ಅನುಕೂಲತೆಗಳು ಹಾಗೂ ವಿದ್ಯುಚ್ಛಕ್ತಿ ಆಧಾರಿತ ಗೃಹೋಪಯೋಗಿ ಸಾಧನಗಳಿಗಾಗಿ ಸ್ಥಳೀಯ ಅಂಗಡಿ ಮಳಿಗೆಗಳ ಸಂಖ್ಯೆಯಲ್ಲಿ ಹೆಚ್ಚಳಗೊಂಡಿರುವುದು ಎಂಬುದಾಗಿ ಶೇಕಡಾ 72ರಿಂದ ಶೇಕಡಾ 78ರಷ್ಟು ಗ್ರಾಮಗಳು ತಿಳಿಸಿದವು.

**4.2.** ಲೆಕ್ಕಪರಿಶೋಧನೆಯು ***ಕಂಡಿಕೆ 4.2.1 ಮತ್ತು 4.2.2ರಲ್ಲಿ*** ಚರ್ಚಿಸಿರುವಂತೆ ಗ್ರಾಹಕರುಗಳಿಗೆ ವಿದ್ಯುತ್ ಸಂಪರ್ಕತೆಗೆ ಸಂಬಂಧಿಸಿದಂತೆ ಕೆಲವು ಲೋಪದೋಷಗಳನ್ನು ಕೂಡ ಗಮನಿಸಿತು.

***ಪ್ರಮಾಣಕ ಸವಾಲು ದಾಖಲೆಗಳಲ್ಲಿನ ಷರತ್ತುಗಳ ಉಲ್ಲಂಘನೆ***

**4.2.1.** ವಿಸಕಂಗಳು ಈ ಕೆಳಗಿನ ಕೋಷ್ಟಕದಲ್ಲಿ ತೋರಿಸಿರುವಂತೆ ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯನ್ನು ಒದಗಿಸುವ ಸಲುವಾಗಿನ ಕೆಲವು ತಾಂತ್ರಿಕ ನಿರ್ದಿಷ್ಟನಿರೂಪಣೆಗಳಿಗೆ ಬದ್ಧತೆಯಿಂದ ಇರದಿರುವ ಮೂಲಕ ಪ್ರಮಾಣಕ ಸವಾಲು ಷರತ್ತುಗಳಿಂದ ಮಾರ್ಗಾಂತರಣ ಮಾಡಿದ್ದವು.

**ಕೋಷ್ಟಕ ಸಂಖ್ಯೆ 4.1: ಪ್ರಮಾಣಕ ಸವಾಲು ಷರತ್ತುಗಳಿಂದ ಮಾರ್ಗಾಂತರಣಗಳು**

| ಕ್ರಮ ಸಂಖ್ಯೆ | ವಿಸಕಂ | ಪ್ರಮಾಣಿತ ಬಿಡ್ ದಾಖಲೆಯ ಷರತ್ತು | ಉಲ್ಲಂಘನೆ | ತಾಲ್ಲೂಕುಗಳು | ಗ್ರಾಮಗಳ ಸಂಖ್ಯೆ | ಗ್ರಾಹಕರುಗಳ ಸಂಖ್ಯೆ |
|---|---|---|---|---|---|---|
| 1 | ಬೆಂವಿಸಕಂ, ಚಾವಿಸನಿ, ಗುವಿಸಕಂ, ಹುವಿಸಕಂ, ಮಂವಿಸಕಂ | ಪರಿಚ್ಛೇದ VIIರ ಕಂಡಿಕೆ 21.1.15 | ಅರ್ಥ್ ಟರ್ಮಿನಲ್ ಅನುವು ಮಾಡದಿದ್ದುದು | ದೊಡ್ಡಬಳ್ಳಾಪುರ, ದೇವನಹಳ್ಳಿ, ಸಿರಾ, ಕೊರಟಗೆರೆ, ತುಮಕೂರು, ಕೆ. ಆರ್. ಪೇಟೆ, ಬೀದರ್, ಔರಾದ, ದೇವದುರ್ಗ, ಸಿಂಧನೂರು, ರಾಣಿಬೆನ್ನೂರು, ಸೊರಬ | 44 | 206 |
| 2 | ಬೆಂವಿಸಕಂ | ಪರಿಚ್ಛೇದ VIIರ ಕಂಡಿಕೆ 21.1.15 | ಫ್ಯೂಸ್ ಮತ್ತು ಎಂಸಿಬಿ ಅನುವು ಮಾಡದಿದ್ದುದು | ದೇವನಹಳ್ಳಿ, ತುಮಕೂರು, ಕೊರಟಗೆರೆ | 9 | 33 |
| 3 | ಬೆಂವಿಸಕಂ, ಗುವಿಸಕಂ, ಹುವಿಸಕಂ | ಕಂಡಿಕೆ 21.1.12 | ಮೀಟರು ಬಾಕ್ಸ್ ಅನುವು ಮಾಡದಿದ್ದುದು | ಸಿರಾ, ಕೊರಟಗೆರೆ, ತುಮಕೂರು, ಸಿಂಧನೂರು, ಹಾವೇರಿ | 11 | 44 |
| 4 | ಬೆಂವಿಸಕಂ | ಪರಿಚ್ಛೇದ VIIರ ಸಂಪುಟ–I | ಫೈಬರ್ ಗ್ಲಾಸ್ ರೀಇನ್‌ಫೋರ್ಸ್ಡ್ ಪಾಲಿಸ್ಟರ್ ಎಸ್‌ಎಂಸಿ ಬೋರ್ಡ್ ಅನುವು ಮಾಡದಿದ್ದುದು | ಸಿರಾ, ಕೊರಟಗೆರೆ, ತುಮಕೂರು | 15 | 176 |
| 5 | ಬೆಂವಿಸಕಂ | ಕಂಡಿಕೆ 1.1.1 | ಸೇವಾ ಕೇಬಲ್ಲಿನ ವಿಸ್ತೃತ ಹರವು (35 ಮೀಟರುಗಳನ್ನು ಮೀರದ) | ದೊಡ್ಡಬಳ್ಳಾಪುರ, ಸಿರಾ, ಕೊರಟಗೆರೆ | 4 | 7 |

**(ಮೂಲ: ಪ್ರಮಾಣಕ ಸವಾಲು ದಾಖಲೆಗಳು ಹಾಗೂ ಫಲಾನುಭವಿ ಸಮೀಕ್ಷೆ)**

ವಿಸಕಂಗಳು ನಿರ್ದಿಷ್ಟ ತಾಂತ್ರಿಕ ನಿರ್ದಿಷ್ಟನಿರೂಪಣೆಗಳಿಗೆ ಅವೆಂದರೆ ಅರ್ಥ್ ಟರ್ಮಿನಲ್‌ಗಳು (206 ಗ್ರಾಹಕರುಗಳು), ಶೀಟ್ ಮೌಲ್ಡಿಂಗ್ ಕಾಂಪೌಂಡ್[48] (ಎಸ್‌ಎಂಸಿ) ಬೋರ್ಡ್ (176 ಗ್ರಾಹಕರುಗಳು), ಮೀಟರು ಬಾಕ್ಸ್ (44 ಗ್ರಾಹಕರುಗಳು) ಹಾಗೂ 33 ಗ್ರಾಹಕರುಗಳಿಗೆ ಫ್ಯೂಸ್/ಮಿನಿಯೇಚರ್ ಸರ್ಕ್ಯೂಟ್ ಬ್ರೇಕರ್[49] (ಎಂಸಿಬಿ) ಅನುವು ಮಾಡದಿರುವ ಮೂಲಕ ಬದ್ಧವಾಗಿರಲಿಲ್ಲ ಎಂಬುದನ್ನು

48 ಎಸ್‌ಎಂಸಿ ಬೋರ್ಡ್‌ನ್ನು ಗ್ರಾಹಕರ ಕಟ್ಟಡ/ಪ್ರಾಂಗಣದಲ್ಲಿ ವಿದ್ಯುತ್ ಮೀಟರನ್ನು ಸ್ಥಿರೀಕರಿಸುವ ಸಲುವಾಗಿ ಉಪಯೋಗಿಸಲಾಗುವುದು.

49 ಎಂಸಿಬಿ, ವಿದ್ಯುತ್ತು ಮಿತಿಮೀರಿದಂತೆ/ಅಧಿಕ ಪ್ರಮಾಣದಲ್ಲಿರುವ ಸಂದರ್ಭಗಳಲ್ಲಿ ವಿದ್ಯುತ್ ಸರ್ಕ್ಯೂಟನ್ನು ಸ್ವಯಂಚಾಲಿತವಾಗಿ ಸ್ವಿಚ್‌ಆಫ್ ಮಾಡುವುದು.

ಲೆಕ್ಕಪರಿಶೋಧನೆಯು ಗಮನಿಸಿತು. ಕುಟುಂಬಗಳಿಗೆ ವಿದ್ಯುತೀಕರಾಣ ವ್ಯವಸ್ಥೆಯನ್ನು ಒದಗಿಸುವಲ್ಲಿ ಈ ಸಾಧನಗಳಿಗೆ ಅನುವು ಮಾಡದಿದ್ದುದು ಪ್ರಮಾಣಕ ಸವಾಲು ಷರತ್ತುಗಳ ಉಲ್ಲಂಘನೆಯಾಗಿದ್ದುದಲ್ಲದೆಯೇ ಈ ಐಟಂಗಳಿಗೆ ಸಂಬಂಧಿಸಿದಂತೆ ಟೆಂಡರಿಗೆ ಇಡಲಾಗಿದ್ದ ಮೌಲ್ಯಗಳಿಗೆ ಸಮನಾಗಿ ಗುತ್ತಿಗೆದಾರರುಗಳಿಗೆ ಅನರ್ಹ ಲಾಭಗಳನ್ನು ಮಾಡಿಕೊಡುವಲ್ಲಿ ಪರಿಣಮಿಸಿದ್ದಿತು.

ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳಿಗೆ ಸಂಬಂಧಿಸಿದಂತೆ ಬೆಂವಿಸಕಂ ಅನುಸರಣಾ ಕ್ರಮಗಳನ್ನು ತೆಗೆದುಕೊಳ್ಳಲು ಕ್ರಮಗಳನ್ನು ಕೈಗೊಳ್ಳಲಾಗುತ್ತಿರುವುದು ಮತ್ತು ಅದನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿತು (ನವಂಬರ್ 2021). ಸೊರಬ ತಾಲ್ಲೂಕಿನ (ಮಂವಿಸಕಂ) ಕುಟುಂಬಗಳಿಗೆ ವಿದ್ಯುತೀಕರಣ ವ್ಯವಸ್ಥೆಯಲ್ಲಿ ಅರ್ಥ್ ಟರ್ಮಿನಲ್ ಅನುವು ಮಾಡದಿರುವುದಕ್ಕೆ ಸಂಬಂಧಿಸಿದಂತೆ, ಅದನ್ನು ಸರಿಪಡಿಸಲಾಗಿರುವುದು/ಒದಗಿಸಲಾಗಿರುವುದು ಎಂಬುದಾಗಿ ತಿಳಿಸಲಾಗಿದ್ದಿತು. ಇನ್ನುಳಿದ ಮೂರು ವಿಸಕಂಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನೀಡಿರುವುದಿಲ್ಲ.

***ಗ್ರಾಹಕ ಸೇವಾ ಸಂಪರ್ಕಗಳಲ್ಲಿನ ಲೋಪದೋಷಗಳು***

**4.2.2.** ಲೆಕ್ಕಪರಿಶೋಧನೆಯು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಿರುವಂತೆ, ಸಮೀಕ್ಷೆ ಮಾಡಲಾದ ಗ್ರಾಮಗಳಲ್ಲಿ ಗ್ರಾಹಕರ ವಿದ್ಯುತೀಕರಣ ವ್ಯವಸ್ಥೆಯಲ್ಲಿನ ಮೀಟರುಗಳು ಕಾರ್ಯಸ್ಥಗಿತಗೊಂಡಿದ್ದುದು, ಸಂಪರ್ಕ ಕಡಿತಗೊಂಡಿದ್ದಂತಹ ವಿದ್ಯುತ್ ಸಂಪರ್ಕಗಳು, ವಿದ್ಯುತ್ ಬಳಕೆಯ ಬಿಲ್ಲುಗಳನ್ನು ನೀಡದಿರುವುದು, ಇವೇ ಮುಂತಾದ ಲೋಪದೋಷಗಳನ್ನು ಗಮನಿಸಿತು:

**ಕೋಷ್ಟಕ ಸಂಖ್ಯೆ 4.2: *ಗ್ರಾಹಕ ಸೇವಾ ಸಂಪರ್ಕಗಳಲ್ಲಿನ ಲೋಪದೋಷಗಳು***

| ಕ್ರಮ ಸಂಖ್ಯೆ | ವಿಸಕಂ | ಲೋಪದೋಷಗಳು | ತಾಲ್ಲೂಕುಗಳು | ಗ್ರಾಮಗಳ ಸಂಖ್ಯೆ | ಗ್ರಾಹಕರ ಸಂಖ್ಯೆ |
|---|---|---|---|---|---|
| 1 | ಬೆಂವಿಸಕಂ | ಗ್ರಾಹಕರ ವಿದ್ಯುತ್ ಮೀಟರುಗಳು ಕಾರ್ಯಸ್ಥಗಿತಗೊಂಡಿರುವುದು | ದೊಡ್ಡಬಳ್ಳಾಪುರ, ದೇವನಹಳ್ಳಿ, ಸಿರಾ, ಕೊರಟಗೆರೆ, ತುಮಕೂರು | 13 | 30 |
| 2 | ಗುವಿಸಕಂ, ಹುವಿಸಕಂ, ಮಂವಿಸಕಂ | ಮೀಟರುಗಳನ್ನು ಸೀಲ್ ಮಾಡದಿರುವುದು | ದೇವದುರ್ಗ, ಸಿಂಧನೂರು, ಹಾವೇರಿ, ರಾಣಿಬೆನ್ನೂರು, ಸೊರಬ, ಹೊಸನಗರ | 29 | 245 |
| 3 | ಬೆಂವಿಸಕಂ, ಹುವಿಸಕಂ | ವಿದ್ಯುತ್ ಸಂಪರ್ಕ ಕಡಿತಕೊಂಡಿರುವ ಗ್ರಾಹಕರುಗಳು | ದೊಡ್ಡಬಳ್ಳಾಪುರ, ದೇವನಹಳ್ಳಿ, ಸಿರಾ, ತುಮಕುರು, ಹಾವೇರಿ, ರಾಣಿಬೆನ್ನೂರು | 12 | 28 |
| 4 | ಬೆಂವಿಸಕಂ, ಚಾವಿಸನಿ, ಹುವಿಸಕಂ | ಮೀಟರುಗಳನ್ನು ಕಡೆಗಣಿಸಿ/ವಿದ್ಯುತ್ ಬಳಕೆ ಮೀಟರಿನಲ್ಲಿ ದಾಖಲಾಗದೆಯೇ ವಿದ್ಯುತ್ ಬಳಕೆಯಾಗಿರುವುದು. | ದೊಡ್ಡಬಳ್ಳಾಪುರ, ದೇವನಹಳ್ಳಿ, ಸಿರಾ, ತುಮಕುರು, ರಾಣಿಬೆನ್ನೂರು, ಮಳವಳ್ಳಿ. | 10 | 20 |
| 5 | ಚಾವಿಸನಿ, ಹುವಿಸಕಂ | ವಿದ್ಯುತ್ತಿನ ಸರಾಸರಿ ಬಳಕೆಗೆ ಬಿಲ್ಲು ಮಾಡಿರುವುದು /ವಿದ್ಯುತ್ ಹೊರೆಯನ್ನು ಮೀಟರಿಗೆ ಸಂಪರ್ಕಿಸದಿರುವುದು | ಕೆ. ಆರ್. ಪೇಟೆ, ಮಳವಳ್ಳಿ, ಹಾವೇರಿ | 5 | 10 |
| 6 | ಬೆಂವಿಸಕಂ, ಚಾವಿಸನಿ | ವಿದ್ಯುತ್ತಿನ ಕಡಿಮೆ ಪ್ರಮಾಣದ ಬಳಕೆ | ದೊಡ್ಡಬಳ್ಳಾಪುರ, ದೇವನಹಳ್ಳಿ, ಕೊರಟಗೆರೆ, ತುಮಕೂರು, ಕೆ. ಆರ್. ಪೇಟೆ | 24 | 47 |
| 7 | ಗುವಿಸಕಂ, ಹುವಿಸಕಂ | ಬಿಲ್ಲುಗಳನ್ನು ನೀಡದಿರುವುದು | ಬೀದರ್, ಹಾವೇರಿ | 2 | 11 |

**(ಮೂಲ: ಫಲಾನುಭವಿಗಳ ಸಮೀಕ್ಷೆ)**

ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು.

- ಸೀಲು ಮಾಡಿರದ ಮೀಟರುಗಳು (245 ಗ್ರಾಹಕರುಗಳಿಗೆ ವಿದ್ಯುತ್ ಸಂಪರ್ಕಗಳು) ಮೀಟರನ್ನು ದುರುಪಯೋಗಪಡಿಸಿಕೊಳ್ಳಲು/ವಿದ್ಯುತ್ತನ್ನು ಕದಿಯಲು ಮುಕ್ತವಾಗಿರುತ್ತವೆ;

- ಉಪಯೋಗಿಸಿಕೊಳ್ಳಲಾಗಿರುವ ವಿದ್ಯುತ್ತನ್ನು ಮೀಟರಿನಲ್ಲಿ ಓದಲು ಸಾಧ್ಯವಿರುವುದಿಲ್ಲವಾದ್ದರಿಂದ ಸ್ಥಗಿತಗೊಂಡಿರುವ/ಕಾರ್ಯನಿರ್ವಹಿಸದ ಮೀಟರುಗಳು (30 ಸಂಖ್ಯೆಗಳು) ವರಮಾನ ನಷ್ಟದಲ್ಲಿ ಪರಿಣಮಿಸುತ್ತವೆ ಹಾಗೂ ಅಲ್ಲದೆಯೇ ಮೀಟರುಗಳನ್ನು ಕಡೆಗಣಿಸಿ ವಿದ್ಯುತ್ತನ್ನು ಹರಿಸುವುದು ಅನಧಿಕೃತವಾಗಿ ವಿದ್ಯುತ್ ಉಪಯೋಗಿಸುವಲ್ಲಿಗೆ ದಾರಿ ಮಾಡಿಕೊಡುತ್ತವೆ (20 ವಿದ್ಯುತ್ ಗ್ರಾಹಕರುಗಳು);

- ವಿದ್ಯುತ್ತನ್ನು ಕಡಿಮೆ ಪ್ರಮಾಣದಲ್ಲಿ ಉಪಯೋಗಿಸಿರುವುದನ್ನು (ವಿದ್ಯುತ್ ಸಂಪರ್ಕ ನೀಡಿದ ದಿನಾಂಕದಿಂದ 0 ಯಿಂದ 300 ಯೂನಿಟ್ಟುಗಳು) 47 ವಿದ್ಯುತ್ ಗ್ರಾಹಕರುಗಳಿಗೆ ಸಂಬಂಧಿಸಿದಂತೆ ಗಮನಿಸಲಾಯಿತು, ಇದು ಮೀಟರುಗಳು ಸರಿಯಾಗಿ ಕಾರ್ಯನಿರ್ವಹಿಸುತ್ತಿರುವುದಿಲ್ಲ ಎಂಬುದನ್ನು ಸೂಚಿಸುವುದು;

- ವಿದ್ಯುತ್ ಸರಬರಾಜು ಮತ್ತು ವಿತರಣಾ ಸಂಹಿತೆಯ ಅನುಸಾರ ವಿದ್ಯುತ್ ಗ್ರಾಹಕರುಗಳಿಗೆ ವಿದ್ಯುತ್ ಸಂಪರ್ಕ ವ್ಯವಸ್ಥೆಯನ್ನು ಕಾರ್ಯೋರ್ಧ್ಯುಕ್ತಗೊಳಿಸಿದ ದಿನಾಂಕದಿಂದ ಎರಡು ತಿಂಗಳುಗಳ ಒಳಗೆ ಬಿಲ್ಲುಗಳನ್ನು ನೀಡಬೇಕಿದ್ದಿತು, ಆದಾಗ್ಯೂ, 11 ಗ್ರಾಹಕರುಗಳಿಗೆ ಬಿಲ್ಲುಗಳನ್ನು ನಿರ್ದಿಷ್ಟ ಅವಧಿಯ ಒಳಗೆ ನೀಡಿರಲಿಲ್ಲ.

ಬೆಂವಿಸಕಂಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾಗಿರುವ ಅಂಶಗಳಿಗೆ ಸಂಬಂಧಿಸಿದಂತೆ ಕ್ರಮಗಳನ್ನು ಕೈಗೊಳ್ಳಲಾಗುವುದು ಹಾಗೂ ಈ ನಿಟ್ಟಿನಲ್ಲಿ ತೆಗೆದುಕೊಳ್ಳಲಾದಂತಹ ಅನುಸರಣಾ ಕ್ರಮಗಳ ಬಗ್ಗೆ ವರದಿಯನ್ನು ಲೆಕ್ಕಪರಿಶೋಧನೆಗೆ ಸಲ್ಲಿಸಲಾಗುವುದು ಎಂಬುದಾಗಿ ಸರ್ಕಾರವು ತಿಳಿಸಿತು (ನವಂಬರ್ 2021). ಮಂವಿಸಕಂಯ ಅಡಿಯಲ್ಲಿನ ಹೊಸನಗರ ತಾಲ್ಲೂಕಿಗೆ ಸಂಬಂಧಿಸಿದಂತೆ, ಯೋಜನೆಯ ಅಡಿಯಲ್ಲಿ ಅಳವಡಿಸಲಾಗಿರುವಂತಹ ಎಲ್ಲ ಮೀಟರುಗಳನ್ನು ಸೀಲು ಮಾಡಲು ಕ್ರಮಗಳನ್ನು ಕೈಗೊಳ್ಳಲಾಗಿರುವುದು ಎಂಬುದಾಗಿ ತಿಳಿಸಿತು. ಉಳಿದ ವಿಸಕಂಗಳಿಗೆ ಸಂಬಂಧಿಸಿದಂತೆ ಉತ್ತರವನ್ನು ನೀಡಿರುವುದಿಲ್ಲ.

### ನಿರ್ಣಯ

ಫಲಾನುಭವಿಗಳ ಸಮೀಕ್ಷೆಯ ವೇಳೆಯಲ್ಲಿ, ಲೆಕ್ಕಪರಿಶೋಧನೆಯು ವಿವಿಧ ಲೋಪದೋಷಗಳನ್ನು ಅವೆಂದರೆ 148 ಫಲಾನುಭವಿಗಳಿಗೆ ಸಿಎಫ್‌ಎಲ್ ಬಲ್ಬುಗಳನ್ನು ಒದಗಿಸದಿರುವುದು, 245 ಗ್ರಾಹಕರುಗಳ ಮೀಟರುಗಳನ್ನು ಸೀಲು ಮಾಡದಿರುವುದರಿಂದ ಅವುಗಳನ್ನು ದುರುಪಯೋಗಪಡಿಸಿಕೊಳ್ಳಲು ಹಾಗೂ ವಿದ್ಯುತ್ತನ್ನು ಕದಿಯಲು ಮುಕ್ತವಾಗಿದ್ದವು, ಮೀಟರುಗಳು ಕಾರ್ಯಸ್ಥಗಿತಗೊಂಡಿದ್ದವು (30 ಗ್ರಾಹಕರುಗಳ ಮೀಟರುಗಳು) ಹಾಗೂ ಗ್ರಾಹಕರಿಗೆ ಬಿಲ್ಲುಗಳನ್ನು ನೀಡದಿರುವುದು (11 ಗ್ರಾಹಕರುಗಳು) ಮತ್ತು ಇದರಿಂದ ವರಮಾನದ ನಷ್ಟ ಹಾಗೂ ಮೀಟರುಗಳನ್ನು ಕಡೆಗಣಿಸಿ ವಿದ್ಯುತ್ತನ್ನು ಹರಿಸಿರುವುದು (20 ಗ್ರಾಹಕರುಗಳು). ಇದರಿಂದ ವಿದ್ಯುತ್ತಿನ ಅನಧಿಕೃತ ಉಪಯೋಗ, ಗ್ರಾಹಕ ಸೇವಾ ಸಂಪರ್ಕಗಳಿಗಾಗಿ ನಿರ್ದಿಷ್ಟ ತಾಂತ್ರಿಕ ನಿರೂಪಣೆಗಳಿಗೆ ಬದ್ಧವಾಗಿರಲಿಲ್ಲ. ಅವೆಂದರೆ (i) ಅರ್ಥ್ ಟರ್ಮಿನಲ್ (206 ಗ್ರಾಹಕರುಗಳು), (ii) ಶೀಟ್ ಮೌಲ್ಡಿಂಗ್ ಕಾಂಪೌಂಡ್ ಬೋರ್ಡ್ (176 ಗ್ರಾಹಕರುಗಳು) (iii) ಮೀಟರ್ ಬಾಕ್ಸ್‌ಗಳು (44 ಗ್ರಾಹಕರುಗಳು) ಹಾಗೂ ಫ್ಯೂಸ್/ಮಿನಿಯೇಚರ್ ಸರ್ಕ್ಯೂಟ್ ಬ್ರೇಕರುಗಳು (33 ಗ್ರಾಹಕರುಗಳು) ಇವುಗಳಿಗೆ ಅನುವು ಮಾಡದಿದ್ದದ್ದು.

### ಶಿಫಾರಸು

**ವಿದ್ಯುತ್ ಕಳ್ಳತನವನ್ನು ಹಾಗೂ ಅದರ ತತ್ಪರಿಣಾಮವಾಗಿ ವರಮಾನದ ನಷ್ಟವನ್ನು ತಡೆಯುವ ಸಲುವಾಗಿ ವಿದ್ಯುತ್ ಮೀಟರುಗಳ ಸಂಪರ್ಕವನ್ನು ತಪ್ಪಿಸಿ ವಿದ್ಯುತ್ತಿನ ದುರ್ಬಳಕೆ, ಮೀಟರುಗಳನ್ನು ಸೀಲು ಮಾಡದಿರುವುದು, ವಿದ್ಯುತ್ ಬಳಕೆ ಬಿಲ್ಲುಗಳನ್ನು ನೀಡದಿರುವುದು, ಇತ್ಯಾದಿ ವಿದ್ಯುತ್ ಬಳಕೆದಾರರಿಗೆ ವಿದ್ಯುತ್ ಸಂಪರ್ಕಗಳಲ್ಲಿನ ಲೋಪದೋಷಗಳನ್ನು ಸರಿಪಡಿಸುವುದನ್ನು ವಿದ್ಯುತ್ ಸರಬರಾಜು ಕಂಪನಿಗಳು**

**ಖಚಿತಪಡಿಸಿಕೊಳ್ಳತಕ್ಕದ್ದು. ಅವುಗಳು ನಿರ್ದಿಷ್ಟ ತಾಂತ್ರಿಕ ನಿರ್ದಿಷ್ಟನಿರೂಪಣೆಗಳಿಗೆ ಬದ್ಧತೆಯಿಂದ ಕೂಡಿರುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.**

## ಮೇಲ್ವಿಚಾರಣೆಗೆ ಸಂಬಂಧಿತ ಅಂಶಗಳು

**4.3.** ಮೇಲ್ವಿಚಾರಣಾ ಸಮಿತಿಯು ಆಗಸ್ಟ್ 2015ರಲ್ಲಿ ರಾಜ್ಯದಲ್ಲಿ ಡಿಡಿಯುಜಿಜೆವೈಯನ್ನು ಕಾರ್ಯಗತಗೊಳಿಸುವ ಸಲುವಾಗಿ ತನ್ನ ಅನುಮೋದನೆಯನ್ನು ನೀಡಿದ್ದಿತು. ಮಾರ್ಗಸೂಚಿಗಳ ಅನುಸಾರ, ಕಾಮಗಾರಿಗಳನ್ನು ಮೇಲ್ವಿಚಾರಣಾ ಸಮಿತಿಯು ತನ್ನ ಅನುಮೋದನೆಯನ್ನು ನೀಡಿದ ದಿನಾಂಕದಿಂದ ಆರು ತಿಂಗಳುಗಳ ಒಳಗೆ ಅಂದರೆ ಫೆಬ್ರವರಿ 2016ರ ವೇಳೆಗೆ ಕಾಮಗಾರಿಗಳನ್ನು ಪ್ರಾರಂಭಿಸಬೇಕಿದ್ದಿತು ಹಾಗೂ 24 ತಿಂಗಳುಗಳ ಒಳಗೆ ಪೂರ್ಣಗೊಳಿಸಬೇಕಿದ್ದಿತು. ಹಿಂದಿನ ಅಧ್ಯಾಯಗಳಲ್ಲಿ ಚರ್ಚಿಸಿರುವಂತೆ ಕಾರ್ಯಗತಗೊಳಿಸುವಲ್ಲಿನ ವಿವಿಧ ಹಂತಗಳಲ್ಲಿ ಲೆಕ್ಕಪರಿಶೋಧನೆಯು ವಿಳಂಬಗಳನ್ನು ಗಮನಿಸಿತು, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿ ನಿರ್ದಿಷ್ಟ ದಿನಾಂಕಗಳನ್ನು ಮೀರಿದಂತೆ 12 ರಿಂದ 37 ತಿಂಗಳುಗಳವರೆಗೆ ವಿಳಂಬಗಳಾಗಿದ್ದವು. ಗುರಿಯಾಗಿಸಿಕೊಳ್ಳಲಾಗಿದ್ದ ಕಾಲಮಿತಿಗಳ ಒಳಗೆ ಕಾಮಗಾರಿಗಳನ್ನು ಪೂರ್ಣಗೊಳಿಸದಿದ್ದ ಕಾರಣ, 723 ಗ್ರಾಮಗಳು[50] (ಲೆಕ್ಕಪರಿಶೋಧನೆಗೆ ಮಾದರಿ ಆಯ್ಕೆ ಮಾಡಿಕೊಳ್ಳಲಾಗಿದ್ದಂತಹ ಹತ್ತು ಜಿಲ್ಲೆಗಳ ಪೈಕಿ ನಾಲ್ಕರಲ್ಲಿ) ಅನ್ವಯಗೊಳ್ಳುವಂತಹ ಶುಲ್ಕಗಳನ್ನು ಪಾವತಿಸುವ ಮೂಲಕ ವಿದ್ಯುತೀಕರಣ ವ್ಯವಸ್ಥೆಯನ್ನು ಉಪಯೋಗಿಸಿಕೊಂಡಿದ್ದವು, ಇದರಿಂದಾಗಿ ಯೋಜನೆಯ ಅಡಿಯಲ್ಲಿ ಲಭ್ಯವಿದ್ದಂತಹ ಉಚಿತ ವಿದ್ಯುಚ್ಛಕ್ತಿಯ ಪ್ರಯೋಜನಗಳನ್ನು ಅರ್ಹ ಫಲಾನುಭವಿಗಳಿಗೆ ವಂಚಿಸುವಲ್ಲಿ ಪರಿಣಮಿಸಿದ್ದಿತು. ಇದು ಮೇಲ್ವಿಚಾರಣೆಯು ಪರಿಣಾಮಕಾರಿತ್ವದಿಂದ ಕೂಡಿರಲಿಲ್ಲ ಎಂಬ ವಾಸ್ತವಾಂಶವನ್ನು ತೋರಿಸುತ್ತಿದ್ದಿತು. ಯೋಜನೆಯ ಅಡಿಯಲ್ಲಿ ಸ್ಥಾಪಿಸಲಾಗಿರುವಂತಹ ವಿವಿಧ ಅಧಿಕಾರಿಗಳಿಂದ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳನ್ನು ಈ ಕೆಳಗೆ ಚರ್ಚಿಸಲಾಗಿದೆ.

### *ವಿವಿಧ ಅಧಿಕಾರಿಗಳಿಂದ ಮೇಲ್ವಿಚಾರಣೆ*

**4.3.1.** ಕರ್ನಾಟಕ ಸರ್ಕಾರವು/ವಿದ್ಯುತ್ ಸರಬರಾಜು ಕಂಪನಿಗಳು ಮಾರ್ಗಸೂಚಿಗಳ ಅನುಸಾರ ವಿವಿಧ ಹಂತಗಳಲ್ಲಿ ಅಗತ್ಯವಿದ್ದಂತಹ ಮೇಲ್ವಿಚಾರಣಾ ವ್ಯವಸ್ಥೆಯನ್ನು ಸ್ಥಾಪಿಸಿದ್ದವು, ಅವೆಂದರೆ,

(i) ಮಂಜೂರಾತಿಗೊಂಡಿರುವಂತಹ ಯೋಜನೆಗಳ ಪ್ರಗತಿಯ ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ ಹಾಗೂ ಉಪ–ಸ್ಟೇಷನ್ನುಗಳಿಗೆ ಅಗತ್ಯವಿರುವ ಭೂಮಿ ಹಂಚಿಕೆ, ಅಗತ್ಯ ಸ್ಥಳದ ಪ್ರವೇಶದ ಹಕ್ಕಿಗಾಗಿ ಅನುಮತಿ, ಅರಣ್ಯ, ರೈಲ್ವೇ, ಇಲಾಖೆಗಳಿಂದ ಅನುಮತಿ, ಇತ್ಯಾದಿ ಕಾರ್ಯಗತಗೊಳಿಸುವಿಕೆಗೆ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವ ಸಲುವಾಗಿ ರಾಜ್ಯ ಮಟ್ಟದ ಸ್ಥಾಯಿ ಸಮಿತಿ[51] (ಎಸ್‌ಎಲ್‌ಎಸ್‌ಸಿ);

(ii) ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿಗಳು (ಡಿಐಎಸ್‌ಎಚ್‌ಎ), ಈ ಹಿಂದೆ ಜಿಲ್ಲಾ ವಿದ್ಯುಚ್ಛಕ್ತಿ ಸಮಿತಿ (ಡಿಇಸಿ) ಎಂಬುದಾಗಿ ಕರೆಯಲ್ಪಡುತ್ತಿದ್ದುದು;

(iii) ಯೋಜನೆಯನ್ನು ಸಮಯೋಚಿತವಾಗಿ ಕಾರ್ಯಗತಗೊಳಿಸುವುದನ್ನು ಖಚಿತಪಡಿಸಿಕೊಳ್ಳುವ ಸಲುವಾಗಿ ಯೋಜನಾ ನಿರ್ವಹಣೆಗೆ/ನಿರ್ವಹಣಾ ಅಧಿಕಾರಿಗಳಿಗೆ ಸಹಾಯ ಮಾಡುವ ಸಲುವಾಗಿ ಯೋಜನಾ ನಿರ್ವಹಣಾ ಸಂಸ್ಥೆಯ (ಪಿಎಂಎ) ನೇಮಕ.

ರಾಜ್ಯ ಮಟ್ಟದ ಸ್ಥಾಯಿ ಸಮಿತಿ, ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿಗಳು ಹಾಗೂ ಯೋಜನಾ ನಿರ್ವಹಣಾ ಸಂಸ್ಥೆಯಿಂದ ಮಾಡಲ್ಪಟ್ಟಂತಹ ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯು ಈ ಕೆಳಗಿನ ಅಂಶಗಳನ್ನು ಗಮನಿಸಿತು.

---

[50] ಬೀದರ್ (68 ಸಂಖ್ಯೆಗಳು), ಹಾವೇರಿ (159 ಸಂಖ್ಯೆಗಳು), ಮೈಸೂರು (426 ಸಂಖ್ಯೆಗಳು), ರಾಯಚೂರು (70 ಸಂಖ್ಯೆಗಳು).

[51] ಇಂಧನ, ಗ್ರಾಮೀಣಾಭಿವೃದ್ಧಿ, ಹಣಕಾಸು, ಪಂಚಾಯತಿ ರಾಜ್, ಅರಣ್ಯ, ಕಂದಾಯ ಇಲಾಖೆಗಳ ಕಾರ್ಯದರ್ಶಿಗಳು ಹಾಗೂ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತದ (ಆರ್‌ಇಸಿ) ಓರ್ವ ಪ್ರತಿನಿಧಿಯನ್ನು ಒಳಗೊಂಡಿದ್ದಿತು.

**ಕೋಷ್ಟಕ ಸಂಖ್ಯೆ 4.3: ಮೇಲ್ವಿಚಾರಣೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು**

| ಕ್ರಮ ಸಂಖ್ಯೆ | ಮೇಲ್ವಿಚಾರಣಾ ಮಟ್ಟ | ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು |
|---|---|---|
| 1 | **ರಾಜ್ಯ ಮಟ್ಟದ ಸ್ಥಾಯಿ ಸಮಿತಿ**<br>• ಆರ್‌ಜಿಜಿವಿವೈ ಸೆಪ್ಟಂಬರ್ 2013ರಲ್ಲಿ ಹಾಗೂ ಡಿಡಿಯುಜಿಜೆ ಯೋಜನೆಗಾಗಿ ಫೆಬ್ರವರಿ 2015ರಲ್ಲಿ ರಚಿಸಲಾಗಿದ್ದಿತು;<br>• ಯೋಜನಾ ವರದಿಗಳನ್ನು ಮೇಲ್ವಿಚಾರಣಾ ಸಮಿತಿಗೆ ಶಿಫಾರಸು ಮಾಡಲು, ಕಾಮಗಾರಿಗಳು ಇತರೆ ಯೋಜನೆಗಳಲ್ಲಿ ಪುನರಾವರ್ತಿತಗೊಂಡಿರದಿರುವುದು/ ಅತಿವ್ಯಾಪನೆಗೊಂಡಿರದಿರುವುದನ್ನು ಖಚಿತಪಡಿಸಿಕೊಳ್ಳಲು ಪ್ರಗತಿಯ ಮೇಲ್ವಿಚಾರಣ, ಗುಣಮಟ್ಟ ನಿಯಂತ್ರಣ ಮತ್ತು ಸಮಸ್ಯೆಗಳನ್ನು ಬಗೆಹರಿಸುವುದು (ಉಪ–ಸ್ಟೇಷನ್ನುಗಳಿಗೆ ಭೂಮಿ, ರೈಲ್ವೇ/ಅರಣ್ಯ ಇಲಾಖೆಯಿಂದ ಅನುಮತಿ, ಇತ್ಯಾದಿ), ಇತ್ಯಾದಿಗಳಿಗೆ ಜವಾಬ್ದಾರಿಯುತವಾಗಿರುವುದು. | • ಸಮಿತಿಯನ್ನು ರಚಿಸಿದ ಆದೇಶವು ಸಮಿತಿಯು ನಡೆಸಬೇಕಾದ ಸಭೆಗಳ ಅಂತರಗಳ ಬಗ್ಗೆ ಮೌನವಾಗಿದ್ದಿತು.<br>• ರಾಜ್ಯ ಮಟ್ಟದ ಸ್ಥಾಯಿ ಸಮಿತಿಯು ಆರ್‌ಜಿಜಿವಿವೈ XIIರ ಬಗ್ಗೆ ಚರ್ಚಿಸುವ ಸಲುವಾಗಿ ನಾಲ್ಕು ವರ್ಷಗಳ (2014–15ರಿಂದ 2017–18) ಅವಧಿಯಲ್ಲಿ ಮೂರು ಸಲ ಸಭೆ ಸೇರಿದ್ದಿತು. ಈ ಸಭೆಗಳನ್ನು ಮೊದಲ ಎರಡು ಸಭೆಗಳಲ್ಲಿ (ಫೆಬ್ರವರಿ 2014, ಆಗಸ್ಟ್ 2014) ಯೋಜನೆಗಳ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಸಲುವಾಗಿ ಹಾಗೂ ಮೂರನೇ ಸಭೆಯಲ್ಲಿ (ನವಂಬರ್ 2018) ಯೋಜನೆಗಳು ಪರಿಪೂರ್ಣಗೊಂಡಿರುವ ಬಗ್ಗೆ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಸಲುವಾಗಿ ನಡೆಸಲಾಗಿದ್ದಿತು.<br>• ಗುತ್ತಿಗೆಗಳನ್ನು ನಿರ್ವಹಿಸದ ಕಾರಣದಿಂದ ಆರ್‌ಜಿಜಿವಿವೈಯಡಿಯಲ್ಲಿ ಚಾವಿಸನಿ ಮತ್ತು ಗುವಿಸಕಂಯ ಯೋಜನೆಗಳನ್ನು ಅಪೂರ್ಣವಾಗಿಯೇ ಅಂತಿಮಗೊಳಿಸಿ ಅದರಿಂದ ₹ 25.17 ಕೋಟಿಯಷ್ಟು ಅನುದಾನ ನಷ್ಟವಾಗಿದ್ದರೂ ಸಮಿತಿಯು ಯೋಜನೆಯ ಕಾರ್ಯಗೊಳಿಸುವಿಕೆಯನ್ನು ಚರ್ಚಿಸಿರಲಿಲ್ಲ. (***ಕಂಡಿಕೆಗಳು: 3.11.3, 3.11.4***)<br>• ಡಿಡಿಯುಜಿಜೆವೈಗೆ ಸಂಬಂಧಿಸಿದಂತೆ, ರಾಜ್ಯ ಮಟ್ಟದ ಸ್ಥಾಯಿ ಸಮಿತಿಯು ಜುಲೈ 2015ರಿಂದ ಡಿಸೆಂಬರ್ 2020ರ ನಡುವೆ ಐದು ಸಲ ಸಭೆ ಸೇರಿದ್ದಿತು. ಈ ಸಭೆಗಳನ್ನು ಪ್ರಮುಖವಾಗಿ ಯೋಜನಾ ವೆಚ್ಚ ಹಾಗೂ ಪೂರಕ ಸವಿವರ ಯೋಜನಾ ವರದಿಗಳಿಗೆ ಅನುಮೋದನೆ ನೀಡುವ ಸಲುವಾಗಿ (ಜುಲೈ 2015, ಸೆಪ್ಟಂಬರ್ 2015 ಹಾಗೂ ನವಂಬರ್ 2016), ಕಾಮಗಾರಿಗಳ ಪ್ರಗತಿಯನ್ನು ಸಮೀಕ್ಷಿಸುವ ಸಲುವಾಗಿ (ಆಗಸ್ಟ್ 2018) ಹಾಗೂ ಯೋಜನೆಗಳು ಪರಿಪೂರ್ಣಗೊಂಡಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳಿಗೆ ಅನುಮೋದನೆ ನೀಡುವ ಸಲುವಾಗಿ (ಡಿಸೆಂಬರ್ 2020) ನಡೆಸಲಾಗಿದ್ದಿತು.<br>• ಪರಿಣಾಮಕಾರಿತ್ವದಿಂದ, ಸಮಿತಿಯು ಕಾಮಗಾರಿಗಳ ಪ್ರಗತಿಯನ್ನು ಸಮೀಕ್ಷಿಸುವ ಉದ್ದೇಶಕ್ಕಾಗಿ ಕೇವಲ ಒಂದು ಸಲ ಮಾತ್ರ ಸೇರಿದ್ದಿತು. ಸಮಿತಿಯು ಅಗತ್ಯ ಸ್ಥಳದ ಪ್ರವೇಶಕ್ಕಾಗಿನ ಹಕ್ಕಿಗೆ ಸಂಬಂಧಿತ ಸಮಸ್ಯೆಗಳು, ಅರಣ್ಯ ಮತ್ತು ರೈಲ್ವೇ ಇಲಾಖೆಗೆ ಅನುಮತಿ, ಭೂಮಿಯು ಲಭ್ಯವಿರದಿದ್ದುದು, ಗುತ್ತಿಗೆದಾರರುಗಳು ಗುತ್ತಿಗೆ ಷರತ್ತುಗಳ ಅನುಸಾರ ಕಾರ್ಯನಿರ್ವಹಿಸದಿದ್ದುದು, ಇತ್ಯಾದಿ ಅಡಚಣೆಗಳ ಬಗ್ಗೆ ಚರ್ಚಿಸಿರಲಿಲ್ಲ (***ಕಂಡಿಕೆಗಳು: 3.5, 3.7***). |
| 2 | **ರಾಜ್ಯ ಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿ (ಡಿಐಎಸ್‌ಎಚ್‌ಎ)**<br>• ಮುಖ್ಯ ಮಂತ್ರಿಯವರು ಅಥವಾ ಅಧಿಕಾರಯುಕ್ತ ಮಂತ್ರಿಯವರು ಸಹ–ಅಧ್ಯಕ್ಷರಾಗಿರುವಂತಹ ರಾಜ್ಯ ಮಟ್ಟದ ಸಮಿತಿಗಳು[52] ರಾಜ್ಯದಲ್ಲಿನ ಅತ್ಯುನ್ನತ ಮಟ್ಟದಲ್ಲಿ ಅನುಸರಣಾ ಕ್ರಮವನ್ನು ತೆಗೆದುಕೊಳ್ಳುವ ಅಗತ್ಯತೆಯಿರುವಂತಹ ಸಮಸ್ಯೆಗಳನ್ನು ಚರ್ಚಿಸುವರು. | • ರಾಜ್ಯ ಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿಯು (ಡಿಐಎಸ್‌ಎಚ್‌ಎ) ಕಡೆಯಪಕ್ಷ ಆರು ತಿಂಗಳಲ್ಲಿ ಒಂದು ಸಲ ಸಭೆ ಸೇರುವ ಅಗತ್ಯತೆಯಿದ್ದಿತು. ಆದಾಗ್ಯೂ, ರಾಜ್ಯ ಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿಯು (ಡಿಐಎಸ್‌ಎಚ್‌ಎ) ಅದರ ರಚನೆಯ ನಂತರ ಸಭೆ ಸೇರಿರಲೇ ಇಲ್ಲ. |
| 3 | **ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿ (ಡಿಐಎಸ್‌ಎಚ್‌ಎ)**<br>• ಜಿಲ್ಲೆಯ ಲೋಕಸಭಾ ಸದಸ್ಯರ ಅಧ್ಯಕ್ಷತೆಯಲ್ಲಿರುವಂತಹ ಜಿಲ್ಲಾ ಮಟ್ಟದಲ್ಲಿ ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು | • ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿಯು ಜಿಲ್ಲಾ ಮಟ್ಟದಲ್ಲಿ ಪ್ರತೀ ತ್ರೈಮಾಸಿಕದಲ್ಲಿ ಒಂದು ಸಲ ಸಭೆ ಸೇರುವ ಅಗತ್ಯತೆಯಿದ್ದಿತು. 2015–16ರಿಂದ 2020–21ರ ಅವಧಿಯಲ್ಲಿ ಐದು ವಿಸಕಂಗಳ ಅಧಿಕಾರ ವ್ಯಾಪ್ತಿಯಲ್ಲಿನ ಜಿಲ್ಲೆಗಳಲ್ಲಿ ನಡೆಸಲು ಅಗತ್ಯತೆಯಿದ್ದಂತಹ 810 ಸಭೆಗಳಿಗೆ |

[52] ಸದಸ್ಯರುಗಳು ಲೋಕಸಭಾ ಸದಸ್ಯರು, ವಿಧಾನಸಭಾ ಸದಸ್ಯರು, ರಾಜ್ಯ ಸರ್ಕಾರಿ ಇಲಾಖೆಗಳ ಮುಖ್ಯಸ್ಥರು, ವಲಯಗಳ ಅಂಚೆ ಮಹಾ ವ್ಯವಸ್ಥಾಪಕರು, ನಿರ್ದೇಶಕರು, ಸಾಂಖ್ಯಿಕ ಹಣಕಾಸು, ಪಜಾ/ಪಪಂ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕರು/ಮುಖ್ಯಸ್ಥರು, ಇತ್ಯಾದಿ ಅಧಿಕಾರಿಗಳನ್ನು ಒಳಗೊಂಡಿರುತ್ತಾರೆ.

| ಕ್ರಮ ಸಂಖ್ಯೆ | ಮೇಲ್ವಿಚಾರಣಾ ಮಟ್ಟ | ಲೆಕ್ಕಪರಿಶೋಧನೆಯಲ್ಲಿ ಗಮನಿಸಲಾದ ಅಂಶಗಳು |
|---|---|---|
| | ಮೇಲ್ವಿಚಾರಣಾ ಸಮಿತಿಗಳನ್ನು[53] (ಡಿಐಎಸ್‌ಎಚ್‌ಎ) ಯೋಜನೆಗಳನ್ನು ಮಾರ್ಗಸೂಚಿಗಳ ಅನುಸಾರ ಕಾರ್ಯಗತಗೊಳಿಸುವುದು, ಅಡಚಣೆಗಳನ್ನು/ ಕುಂದುಕೊರತೆಗಳನ್ನು ಬಗೆಹರಿಸುವುದು, ಮೇಲ್ವಿಚಾರಣೆ, ಇತ್ಯಾದಿಗಳ ಬಗ್ಗೆ ಚರ್ಚಿಸುವ ಸಲುವಾಗಿ ರಚಿಸಲಾಗಿದ್ದಿತು. | ಪ್ರತಿಯಾಗಿ ಕೇವಲ 247 ಸಭೆಗಳನ್ನು ನಡೆಸಲಾಗಿದ್ದಿತು. ಜಿಲ್ಲಾ ಮಟ್ಟದಲ್ಲಿ ನಡೆಸಲಾದಂತಹ ಈ ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಗಳು ಪ್ರಮುಖವಾಗಿ ಕಾಮಗಾರಿಯ ಪ್ರಗತಿಯ ಬಗ್ಗೆ ಚರ್ಚಿಸಿದ್ದವು. |
| 4 | **ಯೋಜನಾ ನಿರ್ವಹಣಾ ಸಂಸ್ಥೆ (ಪಿಎಂಎ)**<br>• ವಿಸಕಂಗಳು ಮೆ. ಆರ್‌ಇಸಿ ಪವರ್ ಡೆವೆಲಪ್ಮೆಂಟ್ ಕಾರ್ಪೊರೇಷನ್ ಲಿಮಿಟೆಡ್, ಇವರನ್ನು ಯೋಜನಾ ನಿರ್ವಹಣಾ ಸಂಸ್ಥೆಯನ್ನಾಗಿ ನೇಮಕ ಮಾಡಿದವು (2015–16).<br>• ಗುತ್ತಿಗೆಯ ವ್ಯಾಪ್ತಿಯು ಯೋಜನೆಯ ಬಗ್ಗೆ ಪೂರ್ವಭಾವಿ ಯೋಜನೆ, ಕ್ರಮಬದ್ಧ ನಿರೂಪಣೆ, ಸವಾಲು ಪ್ರಕ್ರಿಯೆಯ ಸಮನ್ವಯತೆ, ಕಾರ್ಯಗತಗೊಳಿಸುವಿಕೆ, ಗುಣಮಟ್ಟ ನಿಯಂತ್ರಣವೂ ಸೇರಿದಂತೆ ಮೇಲ್ವಿಚಾರಣೆ, ವ್ಯವಸ್ಥಾಪನಾ ಮಾಹಿತಿ ವ್ಯವಸ್ಥೆಯ (ಎಂಐಎಸ್) ನಿರ್ವಹಣೆ ಹಾಗೂ ಅದನ್ನು ವೆಬ್ ಪೋರ್ಟಲಿನಲ್ಲಿ ಇಂದಿನದಿನದನ್ನಾಗಿ ಮಾಡುವುದು ಹಾಗೂ ಗ್ರಾಮೀಣ ವಿದ್ಯುತೀಕರಣ ನಿಗಮ ನಿಯಮಿತ (ಆರ್‌ಇಸಿ)/ ಇಂಧನ ಮಂತ್ರಾಲಯದೊಂದಿಗೆ ಸಮನ್ವಯಗೊಳಿಸುವಿಕೆ, ಇತ್ಯಾದಿಗಳನ್ನು ಒಳಗೊಂಡಿದ್ದಿತು. | • ಯೋಜನಾ ನಿರ್ವಹಣಾ ಸಂಸ್ಥೆ ಸವಿವರ ಯೋಜನಾ ವರದಿಗಳ ತಯಾರಿಕೆ, ಸವಾಲು ಪ್ರಕ್ರಿಯೆ, ಕಾರ್ಯಗತಗೊಳಿಸುವಿಕೆಯಲ್ಲಿನ ಅಡಚಣೆಗಳನ್ನು (ಅರಣ್ಯ, ರೈಲ್ವೇ ಇಲಾಖೆಗಳಿಂದ ಅನುಮತಿ, ಭೂಮಿ ಲಭ್ಯತೆ, ಇತ್ಯಾದಿ), ನಿಯತಕಾಲಿಕ ವರದಿಗಳನ್ನು ಯೋಜನಾ ನಿರ್ವಹಣಾ ಕೋಶಕ್ಕೆ ಸಲ್ಲಿಸುವುದು, ಇತ್ಯಾದಿಗಳಲ್ಲಿ ತೊಡಗಿಸಿಕೊಂಡಿದ್ದುದು/ವಿಸಕಂಗಳಿಗೆ ಸಹಾಯ ಮಾಡಿರುವುದಕ್ಕೆ ಸಂಬಂಧಿಸಿದಂತೆ ಯಾವುದೇ ಸಾಕ್ಷ್ಯಾಧಾರಗಳು ದಾಖಲೆಗಳಲ್ಲಿ ಲಭ್ಯವಿರಲಿಲ್ಲ. |

**(ಮೂಲ: ಕರ್ನಾಟಕ ಸರ್ಕಾರವು ನೀಡಿದ್ದಂತ ಆದೇಶಗಳು, ರಾಜ್ಯ ಮಟ್ಟದ ಸ್ಥಾಯಿ ಸಮಿತಿ, ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿ ಸಭೆಗಳ ನಡವಳಿಗಳು)**

ವಿಸಕಂಗಳಿಂದ ಪ್ರಸ್ತಾವನೆಗಳನ್ನು ಸ್ವೀಕರಿಸಿದಂತೆಲ್ಲಾ ಇಂಧನ ಇಲಾಖೆಯು ರಾಜ್ಯ ಮಟ್ಟದ ಸ್ಥಾಯಿ ಸಮಿತಿ ಸಭೆಗಳನ್ನು ನಡೆಸಲಾಗಿತ್ತು ಎಂಬುದಾಗಿ ಹಾಗೂ ಇಂಧನ ಮಂತ್ರಾಲಯವು ನೀಡಿದ್ದ ವಿಸ್ತರಿಸಿದ ಅವಧಿಯಲ್ಲಿ ಯೋಜನೆಯನ್ನು ಪರಿಪೂರ್ಣಗೊಳಿಸಲಾಗಿತ್ತು ಎಂದೂ ಸರ್ಕಾರವು ತಿಳಿಸಿತು (ನವಂಬರ್ 2021/ಏಪ್ರಿಲ್ 2022). ಯೋಜನಾ ನಿರ್ವಹಣಾ ಸಂಸ್ಥೆಗೆ ಸಂಬಂಧಿಸಿದಂತೆ, ಯೋಜನೆಗಳ ನಿರ್ವಹಣಾ ಸಂಸ್ಥೆಯು ಸವಾಲುಗಳ ಮೌಲ್ಯಮಾಪನ ಪ್ರಕ್ರಿಯೆಯನ್ನು ಕಾಮಗಾರಿಗಳನ್ನು ಗುತ್ತಿಗೆದಾರರುಗಳಿಗೆ ನೀಡುವವರೆಗೂ ತೊಡಗಿಸಿಕೊಂಡಿದ್ದಿತು ಹಾಗೂ ಯೋಜನೆಗಳು ಪರಿಪೂರ್ಣಗೊಂಡಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳನ್ನು ತಯಾರಿಸುವ/ಸಲ್ಲಿಸುವಲ್ಲಿಯೂ ಸಹಾಯ ಮಾಡಿದ್ದಿತು ಎಂಬುದಾಗಿ ತಿಳಿಸಿತು.

ಕಾಮಗಾರಿಗಳು ವಿವಿಧ ಅಡಚಣೆಗಳ ಕಾರಣ ವಿಳಂಬಗೊಂಡಿದ್ದವು ಹಾಗೂ ಅಂತಹ ಅಡಚಣೆಗಳನ್ನು ತ್ವರಿತವಾಗಿ ಬಗೆಹರಿಸುವ ಸಲುವಾಗಿ ರಾಜ್ಯ ಮಟ್ಟದ ಸ್ಥಾಯಿ ಸಮಿತಿಯ ಗಮನಕ್ಕೆ ತಂದಿರಲಿಲ್ಲ, ಇದು ರಾಜ್ಯ ಮಟ್ಟದ ಸ್ಥಾಯಿ ಸಮಿತಿಯನ್ನು ರಚಿಸಿದ್ದರ ಮೂಲ ಉದ್ದೇಶವನ್ನೇ ವಿಫಲಗೊಳಿಸಿದ್ದಿತು ಎಂಬ ವಾಸ್ತವಾಂಶವು ಉಳಿದುಕೊಂಡಿದ್ದಿತು. ಯೋಜನೆಗಳ ನಿರ್ವಹಣಾ ಸಂಸ್ಥೆಯು ಸವಾಲು ಪ್ರಕ್ರಿಯೆಯ ವೇಳೆಯಲ್ಲಿ ತೊಡಗಿಸಿಕೊಂಡಿದ್ದಿತು ಹಾಗೂ ಯೋಜನೆಗಳು ಪರಿಪೂರ್ಣಗೊಂಡಿರುವುದಕ್ಕೆ ಸಂಬಂಧಿತ ಪ್ರಸ್ತಾವನೆಗಳನ್ನು ತಯಾರಿಸುವ/ಸಲ್ಲಿಸುವಲ್ಲಿಯೂ ಸಹಾಯ ಮಾಡಿದ್ದಿತು ಎಂಬುದಾಗಿ ತಿಳಿಸಲಾದ ಉತ್ತರವು ಯಾವುದೇ ದಾಖಲೆಗಳ ಸಾಕ್ಷ್ಯಾಧಾರದಿಂದ ಬೆಂಬಲಿತವಾಗಿರಲಿಲ್ಲ.

## ನಿರ್ಣಯ

ಡಿಡಿಯುಜಿಜೆವೈಯನ್ನು ಕಾರ್ಯಗತಗೊಳಿಸಿದ ಅವಧಿಯಲ್ಲಿ ಕಾಮಗಾರಿಗಳ ಪ್ರಗತಿಯನ್ನು ಸಮೀಕ್ಷಿಸುವ ಸಲುವಾಗಿ ರಾಜ್ಯ ಮಟ್ಟದ ಸ್ಥಾಯಿ ಸಮಿತಿಯು (ಎಸ್‌ಎಲ್‌ಎಸ್‌ಸಿ) ಕೇವಲ ಒಂದು ಸಲ ಮಾತ್ರ ಸಭೆ ಸೇರಿದ್ದಿತು. ರಾಜ್ಯ ಮಟ್ಟದ ಸ್ಥಾಯಿ ಸಮಿತಿಯು ಅಗತ್ಯವಿರುವ ಸ್ಥಳದ ಪ್ರವೇಶದ ಹಕ್ಕಿಗೆ ಸಂಬಂಧಿತ ಸಮಸ್ಯೆಗಳು, ಅರಣ್ಯ ಮತ್ತು ರೈಲ್ವೇ ಇಲಾಖೆಗಳಿಂದ ಅನುಮತಿಗಳು, ಭೂಮಿ ಲಭ್ಯವಿರದಿದ್ದುದು,

[53] ಸದಸ್ಯರುಗಳು ಜಿಲ್ಲಾಧಿಕಾರಿಯವರು, ಜಿಲ್ಲೆಯಲ್ಲಿನ ರಾಜ್ಯ ವಿಧಾನ ಸಭೆಯ ಎಲ್ಲಾ ಸದಸ್ಯರುಗಳು, ರಾಜ್ಯ ಸರ್ಕಾರದಿಂದ ಓರ್ವ ಪ್ರತಿನಿಧಿ, ಎಲ್ಲಾ ಮಹಾನಗರಪಾಲಿಕೆ/ನಗರಪಾಲಿಕೆಯ ಮಹಾಪೌರರುಗಳು, ಜಿಲ್ಲಾ ಪಂಚಾಯತಿಯ ಅಧ್ಯಕ್ಷರುಗಳು, ಇತ್ಯಾದಿ ಅಧಿಕಾರಿಗಳನ್ನು ಒಳಗೊಂಡಿರುತ್ತಾರೆ.

ಗುತ್ತಿಗೆದಾರರುಗಳು ಗುತ್ತಿಗೆ ಷರತ್ತುಗಳ ಅನುಸಾರ ಕಾರ್ಯನಿರ್ವಹಿಸದಿದ್ದುದು, ಇವೇ ಮುಂತಾದ ಕಾಮಗಾರಿಗಳನ್ನು ಕಾರ್ಯಗತಗೊಳಿಸುವಲ್ಲಿನ ಅಡಚಣೆಗಳ ಬಗ್ಗೆ ಚರ್ಚಿಸಿರಲಿಲ್ಲ. ಮುಂದುವರೆದು, ರಾಜ್ಯ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿಗಳು (ಡಿಐಎಸ್‌ಎಚ್‌ಎ) ಅವುಗಳ ರಚನೆಯ ನಂತರ ಯಾವುದೇ ಸಭೆಗಳನ್ನು ನಡೆಸಿರಲಿಲ್ಲ. ಅಲ್ಲದೆಯೇ, ಜಿಲ್ಲಾ ಮಟ್ಟದ ಜಿಲ್ಲಾ ಅಭಿವೃದ್ಧಿ ಸಮನ್ವಯತೆ ಮತ್ತು ಮೇಲ್ವಿಚಾರಣಾ ಸಮಿತಿಗಳು (ಡಿಐಎಸ್‌ಎಚ್‌ಎ) 2015–16ರಿಂದ 2020–21ರ ಅವಧಿಯಲ್ಲಿ ಜಿಲ್ಲಾ ಮಟ್ಟದಲ್ಲಿ ನಡೆಸಲು ಅಗತ್ಯವಿದ್ದಂತಹ 810 ಸಭೆಗಳಿಗೆ ಪ್ರತಿಯಾಗಿ ಕೇವಲ 247 ಸಭೆಗಳನ್ನು (ಶೇಕಡಾ 30) ನಡೆಸಿದ್ದವು. ನಿಗದಿತ ಕಾಲಮಿತಿಯನ್ನು ಮೀರಿದಂತೆ ಕಾಮಗಾರಿಗಳನ್ನು ಕಾರ್ಯಾರಂಭಗೊಳಿಸುವಲ್ಲಿನ ಮತ್ತು ಪೂರ್ಣಗೊಳಿಸುವಲ್ಲಿನ ವಿಳಂಬಗಳು (12ರಿಂದ 37 ತಿಂಗಳುಗಳು) ಫಲಾನುಭವಿಗಳಿಗೆ ಯೋಜನೆಗಳಲ್ಲಿ ಚಿಂತಿಸಲಾಗಿದ್ದಂತಹ ವಿದ್ಯುತ್ತೀಕರಣ ಪ್ರಯೋಜನಗಳನ್ನು ನೀಡುವುದನ್ನು ಮುಂದೂಡುವಲ್ಲಿಗೆ ದಾರಿ ಮಾಡಿಕೊಟ್ಟಿದ್ದಲ್ಲದೆಯೇ 723 ಗ್ರಾಮಗಳಲ್ಲಿನ ಕುಟುಂಬಗಳು ಸ್ವತಃ ತಾವುಗಳೇ ತಮ್ಮ ಮನೆಗಳಿಗೆ ವಿದ್ಯುತ್ತೀಕರಣ ವ್ಯವಸ್ಥೆಯನ್ನು ಮಾಡಿಕೊಂಡವಾದ್ದರಿಂದ ಯೋಜನೆಯ ಅಡಿಯಲ್ಲಿ ಚಿಂತಿಸಲಾಗಿದ್ದ ಉಚಿತ ವಿದ್ಯುತ್ತೀಕರಣ ಅನುಕೂಲತೆಯಿಂದ ಅವರುಗಳಿಗೆ ವಂಚಿಸುವಂತಾಯಿತು.

**ಶಿಫಾರಸು**

- **ಅನರ್ಹ ಸಂಸ್ಥೆಗಳಿಗೆ ಕಾಮಗಾರಿಗಳ ನೀಡಿಕೆ, ಸಮಾಪನ ನಷ್ಟಗಳನ್ನು ವಿಧಿಸದಿರುವುದು, ಕಾಮಗಾರಿಗಳನ್ನು ಪೂರ್ಣಗೊಳಿಸುವಲ್ಲಿನ ವಿಳಂಬಗಳು, ಇತ್ಯಾದಿ ಗುತ್ತಿಗೆ ನಿರ್ವಹಣೆಯ ದೋಷಗಳನ್ನು/ಕೊರತೆಗಳನ್ನು ತಪ್ಪಿಸುವ ರೀತಿಯಲ್ಲಿ ಮೇಲ್ವಿಚಾರಣಾ ಪ್ರಾಧಿಕಾರಗಳು ರಾಜ್ಯ ಮತ್ತು ಜಿಲ್ಲಾ ಮಟ್ಟಗಳಲ್ಲಿ ಯೋಜನೆಗಳ ಅನುಷ್ಠಾನದ ಪ್ರಗತಿಯನ್ನು ನಿಯತಕಾಲಿಕವಾಗಿ ಚರ್ಚಿಸುವುದನ್ನು ಸರ್ಕಾರವು ಖಚಿತಪಡಿಸಿಕೊಳ್ಳತಕ್ಕದ್ದು.**

**ಬೆಂಗಳೂರು** **(ಶಾಂತಿ ಪ್ರಿಯಾ ಎಸ್)**
**ದಿನಾಂಕ** **ಪ್ರಧಾನ ಮಹಾಲೇಖಾಪಾಲರು (ಲೆಕ್ಕಪರಿಶೋಧನೆ–II)**
**ಕರ್ನಾಟಕ**

**ಮೇಲು ರುಜು ಮಾಡಲಾಗಿದೆ**

**ನವದೆಹಲಿ** **(ಗಿರೀಶ್ ಚಂದ್ರ ಮುರ್ಮು)**
**ದಿನಾಂಕ** **ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು**